# ಕರ್ನಾಟಕ ಸರ್ಕಾರ

ಸಂ:ಗ್ರಾಅಪ/18/ಗ್ರಾನೀಸ(2)2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:26.02.2015

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:
ಮ್ಯಾನೇಜರ್,
ಸಿಂಡಿಕೇಟ್ ಬ್ಯಾಂಕ್ BWSSB Branch,
ರಾಕಧೂತ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ,
ಬೆಂಗಳೂರು-09.

ಮಾನ್ಯರೆ,

ವಿಷಯ : ಕೇಂದ್ರ ಹಾಗೂ ರಾಜ್ಯ ವಲಯಗಳಡಿ ಲಭ್ಯವಿರುವ ಅನುದಾನವನ್ನು ಪ್ರಗತಿ ಮತ್ತು ಬೇಡಿಕೆ ಆಧರಿಸಿ ಅರ್ಹ ಜಿಲ್ಲಾ ಪಂಚಾಯತ್‌ಗಳಿಗೆ ವರ್ಗಾಯಿಸುವ ಬಗ್ಗೆ.

---

**2014-15ನೇ** ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಆಧಾರದ ಮೇಲೆ ಈಗಾಗಲೇ ಅನುದಾನ ಬಿಡುಗಡೆ ಮಾಡಿದ್ದು, ಹಲವಾರು ಜಿಲ್ಲೆಗಳಲ್ಲಿ ಪ್ರಸ್ತುತ ಲಭ್ಯವಿರುವ ಅನುದಾನವು ಒಟ್ಟಾರೆ **ಶೇ.80**ಕ್ಕಿಂತ ಕಡಿಮೆ ವಿನಿಯೋಗವಾಗಿರುವುದು ಕಂಡು ಬಂದಿದೆ. ಸದರಿ ಜಿಲ್ಲಾ ಪಂಚಾಯತ್‌ಗಳಿಂದ ಹೆಚ್ಚು ವೆಚ್ಚ ಭರಿಸುವ ಜಿಲ್ಲೆಗಳಿಗೆ, ಅವಶ್ಯಕತೆಗೆ ತಕ್ಕಂತೆ O&M, Sustainability ಹಾಗೂ NRDWP (C&Q) ಘಟಕದಡಿ ಅನುದಾನ ವರ್ಗಾಯಿಸಬೇಕಾಗಿದೆ. ಆದ್ದರಿಂದ, ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಸಿಂಡಿಕೇಟ್ ಬ್ಯಾಂಕ್, ಅವೆನ್ಯೂ ರಸ್ತೆ, ಬೆಂಗಳೂರುರವರು ಕೆಳಕಂಡಂತೆ ಮರು ಹಂಚಿಕೆಯಾದ ಪರಿಷ್ಕೃತ ಅನುದಾನದ ವಿವರಗಳನ್ನು ಅಳವಡಿಸಿಕೊಳ್ಳಲು ಕ್ರಮವಹಿಸತಕ್ಕದ್ದು. ಸಿಂಡಿಕೇಟ್ ಬ್ಯಾಂಕ್ ಇದರನ್ವಯ ಆಯಾಯ ಜಿಲ್ಲಾ ಪಂಚಾಯತ್‌ಗಳು ನೀಡುವ ಬಿಲ್‌ಗಳನ್ನು ಪರಿಶೀಲಿಸಿ, **NRDWP (C&Q)ಯಡಿ RTGS** ಮುಖೇನ ಮಾನ್ಯ ಮಾಡಬೇಕು. **ದಿನಾಂಕ:25.02.2015ರ** ಬ್ಯಾಂಕ್ ತಃಖ್ತೆ ಆಧಾರದ ಮೇಲೆ O&Mಯಡಿ ಲಭ್ಯವಿರುವ **ರೂ.2884.88ಲಕ್ಷ**ಗಳನ್ನು ಆಯಾ ಜಿಲ್ಲೆಗಳ C&Q ಬಾಬ್ತಿಗೆ ತಕ್ಷಣ ವರ್ಗಾಯಿಸುವುದು. ಈ ರೀತಿ ಮಾಡುವಾಗ ಇತರೆ ಜಿಲ್ಲೆಗಳಲ್ಲಿ O&M ಬಾಬ್ತಿನಡಿ ಬಾಕಿಯಿರುವ ಬಿಲ್ ಗಳನ್ನು ವಿಲೇವಾರಿ ಮಾಡಿ ಉಳಿದ ಅನುದಾನವನ್ನು ಮಾತ್ರ ವರ್ಗಾಹಿಸಬೇಕು. ಈ ರೀತಿ ಇಂಧೀಕರಿಸಿದ ತಃಖ್ತೆಯನ್ನು **ದಿನಾಂಕ:27.02.2015ರಂದು** ಸರ್ಕಾರಕ್ಕೆ ನೀಡಬೇಕು.

(ರೂ.ಲಕ್ಷಗಳಲ್ಲಿ)

| ಕ್ರಸಂ | ಜಿಲ್ಲಾ ಪಂಚಾಯತ್ | ಕಡಿತಗೊಳಿಸಿದ ಅನುದಾನ | ಜಿಲ್ಲಾ ಪಂಚಾಯತ್ | ವರ್ಗಾಯಿಸಿದ ಅನುದಾನ |
|---|---|---|---|---|
| 1 | 2 | 3 | 4 | 5 |
| 1 | ಬೀದರ್ | 800.00 | ಹಾವೇರಿ | 200.00 |
| 2 | ಗುಲಬರ್ಗ | 400.00 | ಕಾರವಾರ | 200.00 |
| 3 | ಕೋಲಾರ | 300.00 | ಬೆಳಗಾವಿ | 400.00 |
| 5 | ರಾಯಚೂರು DDP | 500.00 | ರಾಯಚೂರು C&Q | 500.00 |
| 6 | ಯಾದಗಿರಿ | 300.00 | ಮಂಡ್ಯ | 600.00 |
| 7 | ಬಳ್ಳಾರಿ DDP | 300.00 | ಬಳ್ಳಾರಿ C&Q | 300.00 |
| 8 | | | ದಕ್ಷಿಣ ಕನ್ನಡ | 200.00 |
| 9 | | | ತುಮಕೂರು | 200.00 |
| | ಒಟ್ಟು ಮೊತ್ತ | **2600.00** | ಒಟ್ಟು ಮೊತ್ತ | **2600.00** |

ತಮ್ಮ ವಿಶ್ವಾಸಿ,

26/2/15

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಇಮೇಲ್:rk3452000@gmail.com
ಫೋನ್:22240508, ಫ್ಯಾಕ್ಸ್: 22240509

**ಪ್ರತಿಗಳು:**

1. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು-09.
2. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
3. ಎಲ್ಲಾ (38) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.